ಸಿಸಿ ನಂ. 524/2018 ಪಿಡಬ್ಲೂ :1

ದಿನಾಂಕಃ 30-05-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ವಿ ಪಿ ಟಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಪವರ್ ಆಪ್ ಅಟರ್ನಿಯ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -1 ಎಂದು, ಆರೋಪಿಯು ನೀಡಿದ ಚೆಕ್ ಹಾಜರು ಪಡಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ . ಸದರಿ ಸಹಿಯನ್ನು ರುಜುವಾತು ಪಡಿಸುವ ಶರತ್ತಿಗೆ ಒಳಪಟ್ಟು ನಿಪಿ-2 ಎ ಎಂದು ಗುರುತಿಸಲಾಯಿತು. ಬ್ಯಾಂಕನವರು ಕೊಟ್ಟಿರುವ ಮೆಮೊವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -3 ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -5 ಎಂದು ಗುರುತಿಸಲಾಯಿತು. ಸದ್ರಿ ನೋಟಿಸನ್ನು ಆರೋಪಿಯು ಸ್ವೀಕರಿಸದ ಕಾರಣ ವಾಪಸ್ಸು ಬಂದಿದ್ದು ಅದನ್ನು ಅಂಚೆ ಲಕೋಟೆ ಸಮೇತವಾಗಿ ಹಾಜರು ಪಡಿಸಿರುತ್ತೇವೆ. ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಯಿತು . ಸದರಿ ಅಂಚೆ ಲಕೋಟೆಯನ್ನು ನಿಪಿ -6 ಎಂದು, ಅದರೊಳಗಿದ್ದ ನೋಟಸಿನ್ನು ನಿಪಿ-6 ಎ ಎಂದು ಗುರುತಿಸಲಾಯಿತು.

3. ಆರೋಪಿಗೆ ಮತ್ತು ಅವರ ಜಾಮೀನುದಾರರಿಗೆ ನಾವು ಕಳುಹಿಸಿರುವ ನೋಟಿಸಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಸದ್ರಿ ನೋಟಿಸನ್ನು ಆರೋಪಿಯು ಸ್ವೀಕರಿಸದ ಕಾರಣ ವಾಪಸ್ಸು ಬಂದಿದ್ದು ಅದನ್ನು ಅಂಚೆ ಲಕೋಟೆ ಸಮೇತವಾಗಿ ಹಾಜರು ಪಡಿಸಿರುತ್ತೇವೆ. ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಯಿತು . ಸದರಿ ಅಂಚೆ ಲಕೋಟೆಯನ್ನು ನಿಪಿ -8 ಎಂದು, ಅದರೊಳಗಿದ್ದ ನೋಟಿಸನ್ನು ನಿಪಿ -8 ಎ ಎಂದು ಗುರುತಿಸಲಾಯಿತು. ಸದ್ರಿ ನೋಟಿಸನ್ನು ಆರೋಪಿಯ ಜಾಮೀನುದಾರರಿಗೆ ಜಾರಿಯಾಗದ ಕಾರಣ ವಾಪಸ್ಸು ಬಂದಿದ್ದು ಅದನ್ನು ಅಂಚೆ ಲಕೋಟೆ ಸಮೇತವಾಗಿ ಹಾಜರು ಪಡಿಸಿರುತ್ತೇವೆ . ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಯಿತು . ಸದರಿ ಅಂಚೆ ಲಕೋಟೆಯನ್ನು ನಿಪಿ -9 ಎಂದು, ಅದರೊಳಗಿದ್ದ ನೋಟಿಸನ್ನು ನಿಪಿ -9 ಎ ಎಂದು ಗುರುತಿಸಲಾಯಿತು. ಲೋನ್ ಕಮ್ ಹೈಪೋಥಿಕೇಶನ್ ಕರಾರು ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-10 ಎಂದು, ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -11 ಎಂದು ಗುರುತಿಸಲಾಯಿತು.

( ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.